ಹುಡ್ಗಿ ತಾಯಿ ಒಪ್ಕೊಂಡಿದ್ದು. ಅದು ಅಲ್ದೆ, ನಿಮ್ ಹುಡಗನಿಗ್ ಬೇರೆ ಮೂವತ್ತೆಂಟು ವಯಸ್ಸು. ಯಾರ್ ಕೊಡ್ತಾ ಇದ್ರು ಹುಡ್ಗೀನ? ಇವಾಗ್ಲೂ ಬೇಡ ಅಂತ ಹೇಳಿ ಬೇಕಾದ್ರೆ. ಇನ್ನು ಎರಡು ದಿನಕ್ಕೆ ಇದೇ ದುಡ್ಡಿಗೆ ಕುಂದಾಪುರದ ಒಂದ್ ಗಂಡಿಗೆ ಮದ್ವೆ ಮಾಡಿ ಕೊಡ್ತೀನಿ" ಅಂತ ದೊಡ್ಡವ್ವ ಹೇಳುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿತ್ತು. ವ್ಯಾಪಾರ ಜೋರಾಗಿಯೇ ನಡೆದಂತಿತ್ತು. ಮತ್ತೆ ಬೇರೆ ಯಾರೋ ಸಣ್ಣದಾಗಿ ಮಾತಾಡುತ್ತಿದ್ದುದು ಕೇಳಿಸಿತು. ಯಾರೋ ಪಕ್ಕದ ಕೋಣೆಯಿಂದ ಬಿರುಸು ನಡೆಯಲ್ಲಿ ಹೊರನಡೆದು ಮತ್ತೆ ಅದೇ ಬಿರುಸಿನಲ್ಲಿ ಒಳ ಬಂದಿದ್ದು ತಿಳಿಯಿತು. ಸ್ವಲ್ಪ ಸಮಯದಲ್ಲೇ ದೊಡ್ಡವ್ವ ಕೈಯಲ್ಲಿ ಪ್ಲಾಸ್ಟಿಕ್ ಚೀಲವನ್ನು ಹಿಡಿದು ನಾನಿದ್ದ ಕೋಣೆಯಲ್ಲೇ ಪ್ರತ್ಯಕ್ಷವಾದಳು. ಯಾವ ಮಾತನ್ನೂ ಆಡದೆ ಅದನ್ನು ತನ್ನ ಚೀಲದಲ್ಲಿಟ್ಟು, ಅದರ ಮೇಲೆ ತಲೆ ಇಟ್ಟು ಮಲಗಿದಳು. ಮೌನವಾಗಿ ನೋಡುತ್ತಿದ್ದ ನನಗೆ, ಏನಾದರು ಹೇಳಬೇಕೇ? ಎಂದು ಕೇಳಿದಳು. ಹೇಳುವುದಾದರೂ ಏನು ಎಂದು ಒಂದೂ ತಿಳಿಯದೆ ಸುಮ್ಮನಾಗಿದ್ದೆ. ಮಾವನ ಜೊತೆ ಉಳಿದವರು ಎಲ್ಲಿರುವರೆಂದು ತಿಳಿಯಲಿಲ್ಲ. ಶೌಚಾಲಯಕ್ಕೆಂದು ಎದ್ದು ಹೊರ ನಡೆದೆ. ಮನೆ ಪೂರ್ತಿ ಖಾಲಿ ಎಂಬಂತೆ ಒಬ್ಬರೂ ಕಾಣಿಸಲಿಲ್ಲ. ಊಟದ ಸಮಯದಲ್ಲಿ ನೋಡಿದ ಗುರುತಿನ ಮೇರೆಗೆ ಶೌಚಾಲಯಕ್ಕೆ ಹೋಗಿ ಬಂದೆ. ಮನೆ ತುಂಬಾ ದೊಡ್ಡದಾಗಿತ್ತು. ಹಳೆ ಕಾಲದ ಮನೆ. ಕನಿಷ್ಠವೆಂದರೂ ನನ್ನೂರ ಮನೆಯ ಹತ್ತು ಪಟ್ಟಾದರೂ ದೊಡ್ಡದಿತ್ತು. ಮನೆಯ ಸುತ್ತಲೂ ಅಡಿಕೆ, ತೆಂಗಿನ ತೋಟ. ಉತ್ತಮ ಸ್ಥಿತಿವಂತರ ಮನೆಯಲ್ಲಿ ಇರಬಹುದೆಂಬ ಖುಷಿ ಮನಸ್ಸಿಗೆ ಒಂದು ಬಗೆಯ ಸಂತೋಷವನ್ನು ಕೊಟ್ಟಿತು. ಬೇರೆಯ ಊರು, ಜನ, ಮದುಮಗನ ವಯಸ್ಸು ಯಾವುದೂ ಬೇಕಾಗಿರಲಿಲ್ಲ. ಪರಿಗಣಿಸಬೇಕೆಂಬ ವಯಸ್ಸೂ ಅದಾಗಿರಲಿಲ್ಲ.

ಸೂರ್ಯ ಸಂಪೂರ್ಣವಾಗಿ ಮುಳುಗಿದ್ದ. ಸುತ್ತಲೂ ದೊಡ್ಡದಾಗಿ ಬೆಳಗಿದ್ದ ದೀಪದ ಮಧ್ಯವೇ ದೊಡ್ಡವ್ವ ಮಲಗಿ ನಿದ್ರಿಸುತ್ತಿದ್ದಳು. ಯಾರೋ ನಡುವಯಸ್ಸಿನ ಹೆಂಗಸು ಕೋಣೆ ಬಾಗಿಲು ತಳ್ಳಿ ಒಳ ಬಂದಳು. ತಲೆ ತಗ್ಗಿಸಿ ಕುಳಿತಿದ್ದ ನನ್ನ ಮುಂದೆ ಎರಡು ರೇಶಿಮೆ ಸೀರೆ, ಅದಕ್ಕೆ ಹೊಂದುವ ರವಿಕೆ, ಆಭರಣಗಳ ಸಣ್ಣಪೆಟ್ಟಿಗೆಯನ್ನು ತಂದು ಇಟ್ಟಳು. ತಲೆ ಎತ್ತಬೇಕೆಂದು ಅನಿಸುತ್ತಿದ್ದರೂ ತಲೆ ತಗ್ಗಿಸಿ ಕುಳಿತಿದ್ದೆ. ''ಶಾರದೆ... ಶಾರದೆ...'' ಎಂದು ಕರೆಯುತ್ತಿದ್ದರೂ ತಲೆ ಎತ್ತಲಿಲ್ಲ. ಆ ಶಬ್ದಕ್ಕೆ ದೊಡ್ಡವ್ವ ಎದ್ದು ಕುಳಿತಳು. ''ಶಾರದೆ... ನಿನ್ನೆ ಕರಿತಿರೋದು, ಮಾತಾಡು" ಎಂದಾಗಲೇ ತಲೆ ಎತ್ತಿ ನೋಡಿದೆ. ನನ್ನ ವಯಸ್ಸಿನೊಂದಿಗೆ ಹೆಸರೂ ಬದಲಾಗಿದ್ದು ಆಗಲೇ ಗೊತ್ತಾಗಿದ್ದು. ಎದುರು ನಿಂತವಳು ಲಕ್ಷಣವಾದ ಹೆಂಗಸು. ವಯಸ್ಸು ಅರವತ್ತು ದಾಟಿತ್ತು. ''ಇವರೇ ನಿನ್ನ ಅತ್ತೆ'' ಅಂತ ದೊಡ್ಡವ್ವ ಪರಿಚಯ ಮಾಡಿಕೊಟ್ಟಳು. ಏನು ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಸುಮ್ಮನೆ ಅವರನ್ನೇ ನೋಡುತ್ತಾ ಕುಳಿತಿದ್ದೆ. ಅವರು ಮಾತು ಮುಂದುವರಿಸಿದ್ದರು. ''ಈ ಸೀರೆನ ನಾಳೆ ಧಾರೆಗೆ ಉಟ್ಕೋ... ಇದನ್ನ ಮದುವೆ ಆದ ಮೇಲೆ ಉಟ್ಕೋ'' ಎಂದು ಪ್ರತ್ಯೇಕಿಸಿ ತೋರಿಸಿದರು. ಆಭರಣದ ಪೆಟ್ಟಿಗೆಯ ಮುಚ್ಚಳ ತಗೆದು, ''ಇದೆಲ್ಲ ನಿನಗೆ, ಜೋಪಾನವಾಗಿ ಇಟ್ಕೋ'' ಎಂದು ಕೊಟ್ಟರು. ಸುಮ್ಮನೆ ತಲೆ ಅಲ್ಲಾಡಿಸಿದೆ. ಊಟಕ್ಕೆ ಬನ್ನಿ ಎಂದು ಹೇಳಿ ಹೊರಟು ಹೋದರು. ಅವರು ಹೊರಹೋಗುತ್ತಿದ್ದಂತೆ ಎಲ್ಲವನ್ನೂ ಸರಿಯಾಗಿ ಪರೀಕ್ಷಿಸಿದ ದೊಡ್ಡವ್ವ ಸರಿಯಾಗಿ ಎತ್ತಿಟ್ಟುಕೊಳ್ಳುವಂತೆ ತಿಳಿಸಿ ಊಟಕ್ಕೆಂದು ಹೊರನಡೆದಳು. ಊಟ ಮುಗಿಸಿ ಮಲಗಿದ ನಾವು ಬೆಳಗ್ಗೆ ಎದ್ದಿದ್ದು ನಾಲ್ಕು ಗಂಟೆಗೆ.

ಹಿಂದಿನ ದಿನದಂತೆ ಇವತ್ತು ತಣ್ಣೀರಿನ ಸ್ನಾನವಲ್ಲ. ಹಂಡೆತುಂಬಾ ಕುದಿಯುತ್ತಿದ್ದ ಬಿಸಿ ನೀರಿನ ಜೊತೆ ಘಮ್ ಎನ್ನುವ ಸೋಪ್ ಕೂಡ ಇತ್ತು. ಹತ್ತಿರವಿದ್ದ ಸಮುದ್ರದ ಭೋರ್ಗರೆತಕ್ಕೆ ಕಿವಿಯಾಗಿ ಅರ್ಧಹಂಡೆ ನೀರು ಖಾಲಿ ಮಾಡಿದ್ದೆ. ಮುಂದಿನದ್ದೆಲ್ಲಾ ತರಾತುರಿಯ ನಡಿಗೆ. ರೇಶಿಮೆ ಸೀರೆ ಉಡಿಸಿ ಅಲಂಕರಿಸಿದ ದೊಡ್ಡವ್ವ, ನಿಜವಾಗಿಯೂ ನನ್ನನ್ನು ಮದುಮಗಳನ್ನಾಗಿಸಿದ್ದಳು. ಸಂಪೂರ್ಣ